**ಭಾರತದ ಹೊರಗೆ ಪ್ರವಾಸಕ್ಕೆ ವಿದೇಶೀ ವಿನಿಮಯದ ಬಿಡುಗಡೆ**

ಜುಲೈ ೧, ೨೦೦೨ರಂದು ಇದ್ದಂತೆ

**ಭಾರತೀಯ ರಿಸರ್ವ್ ಬ್ಯಾಂಕು**
**ವಿದೇಶೀ ವಿನಿಮಯ ನಿಯಂತ್ರಣ ಇಲಾಖೆ**
**ಕೇಂದ್ರ ಕಚೇರಿ**
**ಮುಂಬೈ**

ಇಸಿ. ಸಿಓ.ಪಿಸಿಡಿ.ಸಂಖ್ಯೆ.೩/೧೫.೦೨.೭೬/೨೦೦೨–೦೩ ಜುಲೈ ೧೫, ೨೦೦೨

ಗೆ,

ವಿದೇಶೀ ವಿನಿಮಯ ವ್ಯವಹಾರದಲ್ಲಿ ತೊಡಗಿರುವ ಎಲ್ಲ ಅಧಿಕೃತ ವ್ಯಾಪಾರಿಗಳು,

ಮಾನ್ಯರೇ,

**ಪ್ರಧಾನ ಸುತ್ತೋಲೆ–ಭಾರತದ ಹೊರಗೆ ಪ್ರವಾಸಕ್ಕೆ ವಿದೇಶೀ ವಿನಿಮಯದ ಬಿಡುಗಡೆ**

ವಿದೇಶೀ ವಿನಿಮಯ ನಿರ್ವಹಣೆ ಕಾಯಿದೆ, ೧೯೯೯ ನ್ನು ಜೂನ್ ೧, ೨೦೦೦ ದಿಂದ ಪರಿಣಮಿಸುವಂತೆ ಜಾರಿಗೆ ತಂದಿರುವ ವಿಷಯ ತಮಗೆ ತಿಳಿದೇ ಇದೆ. ಅಧಿನಿಯಮದ ೫ ನೇ ಪ್ರಕರಣದ ಅನ್ವಯ ಯಾರೇ ವ್ಯಕ್ತಿಯು ಒಂದು ಚಾಲ್ತಿ ಖಾತೆ ವ್ಯವಹಾರಕ್ಕಾಗಿ ಯಾರೇ ಅಧಿಕೃತ ವ್ಯಕ್ತಿಗೆ ಮತ್ತು ವ್ಯಕ್ತಿಯಿಂದ ವಿದೇಶೀ ವಿನಿಮಯವನ್ನು ಮಾರಾಟ ಮಾಡಬಹುದು ಅಥವಾ ತೆಗೆಯಬಹುದು. ಆದರೆ, ಕೇಂದ್ರ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ಚಾಲ್ತಿ ಖಾತೆ ವ್ಯವಹಾರಗಳಿಗೆ ಕೆಲವು ನಿರ್ಬಂಧಗಳನ್ನು ವಿಧಿಸುವ ಅಧಿಕಾರ ಹೊಂದಿದೆ. ಅದರಂತೆ, ಭಾರತ ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ ಎಸ್ಓ ೩೦೧ (ಇ) ದಿನಾಂಕ ಮಾರ್ಚ್ ೩೦, ೨೦೦೧ ರಿಂದ ತಿದ್ದುಪಡಿ ಮಾಡಲಾದಂಥ ಅಧಿಸೂಚನೆ ಸಂಖ್ಯೆ ಜಿಎಸ್ಆರ್ ೩೮೧ (ಇ) ದಿನಾಂಕ ಮೇ ೩, ೨೦೦೦ ನ್ನು ಹೊರಡಿಸಿದೆ.

೨. ರಿಸರ್ವ್ ಬ್ಯಾಂಕು, ಭಾರತದ ಹೊರಗೆ ಪ್ರವಾಸಕ್ಕೆ ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡುವುದಕ್ಕೆ ಅಧಿಕೃತ ವ್ಯಕ್ತಿಗಳಿಗೆ ನೀಡಿರುವ ನಿರ್ದೇಶನಗಳನ್ನು ಒಳಗೊಂಡ ಹಲವಾರು ಸುತ್ತೋಲೆಗಳನ್ನು ಹೊರಡಿಸಿದೆ.

೩. " ಭಾರತದ ಹೊರಗೆ ಪ್ರವಾಸಕ್ಕೆ ವಿದೇಶೀ ವಿನಿಮಯ ಬಿಡುಗಡೆ " ಮಾಡುವ ವಿಷಯ ಕುರಿತ ಹಾಲಿ ಇರುವ ಎಲ್ಲ ಸೂಚನೆಗಳನ್ನು ಒಂದೇ ಸ್ಥಳದಲ್ಲಿ ಪಡೆಯಲು ಅಧಿಕೃತ ವ್ಯಾಪಾರಿಗಳಿಗೆ ಮತ್ತು ಪೂರ್ಣ ಪ್ರಮಾಣದ ಹಣ ಪರಿವರ್ತನೆಕಾರರಿಗೆ ಸಾಧ್ಯವಾಗುವಂತೆ ಮಾಡುವ ಸಲುವಾಗಿ, ರಿಸರ್ವ್ ಬ್ಯಾಂಕು ತನ್ನ ಪತ್ರ ಇಸಿ.ಸಿಓ.ಪಿಸಿಡಿ ಸಂಖ್ಯೆ. ೧೭/೧೫.೦೨.೭೬/೨೦೦೧–೦೨ ರ ಅಡಿದಲ್ಲಿ ಒಂದು ಪ್ರಧಾನ ಸುತ್ತೋಲೆಯನ್ನು ಹೊರಡಿಸಿದೆ. ಈ ಬೃಹತ್ ಸುತ್ತೋಲೆಯು ಈ ಕೆಳಗೆ ತಿಳಿಸಿರುವ ಸುತ್ತೋಲೆಗಳಲ್ಲಿ ಒಳಗೊಂಡಿರುವ ನಿರ್ದೇಶನಗಳನ್ನು ಕ್ರೋಢೀಕರಿಸಿ ಸೂಚನೆಗಳನ್ನು ಜುಲೈ ೧, ೨೦೦೨ ರಂದು ಇದ್ದಂತೆ ತಹಲ್‌ವರೆಗೆ ಪರಿಷ್ಕರಿಸುತ್ತದೆ.

| | | |
|---|---|---|
| (ಇ) | ಎ.ಪಿ (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ ೧<br>ಎ.ಸಿ (ಎಫ್‌ಎಲ್ ಶ್ರೇಣಿ) ಸುತ್ತೋಲೆ ಸಂಖ್ಯೆ ೧ | ಜೂನ್ ೧, ೨೦೦೦ |
| (ಈ) | ಎ.ಪಿ (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ ೧೯ | ಅಕ್ಟೋಬರ್ ೩೦, ೨೦೦೦ |
| (ಉ) | ಎ.ಪಿ (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ ೨೦<br>ಎ.ಪಿ (ಎಫ್‌ಎಲ್ ಶ್ರೇಣಿ) ಸುತ್ತೋಲೆ ಸಂಖ್ಯೆ ೨ | ನವೆಂಬರ್ ೧೬, ೨೦೦೦ |
| (ಊ) | ಎ.ಪಿ (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ ೧೧<br>ಎ.ಪಿ (ಎಫ್‌ಎಲ್ ಶ್ರೇಣಿ) ಸುತ್ತೋಲೆ ಸಂಖ್ಯೆ ೧ | ನವೆಂಬರ್ ೧೩, ೨೦೦೧ |
| (ಋ) | ಎ.ಪಿ (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ ೧೧<br>ಎ.ಪಿ (ಎಫ್‌ಎಲ್ ಶ್ರೇಣಿ) ಸುತ್ತೋಲೆ ಸಂಖ್ಯೆ ೨ | ನವೆಂಬರ್ ೨೩, ೨೦೦೧ |

ತಮ್ಮ ವಿಶ್ವಾಸಿ,

ಗ್ರೇಸ್ ಕೋಶಿ
ಮುಖ್ಯ ಪ್ರಧಾನ ವ್ಯವಸ್ಥಾಪಕ.

**ಭಾರತದ ಹೊರಗೆ ಪ್ರವಾಸಕ್ಕೆ ವಿದೇಶೀ ವಿನಿಮಯ ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದ ಪ್ರಧಾನ ಸುತ್ತೋಲೆ**

ಒಳಾಂಶಗಳು

ಭಾಗ – ೧ ವಿದೇಶೀ ವಿನಿಮಯ ನಿರ್ವಹಣೆ (ಚಾಲ್ತಿ ಖಾತೆ ವ್ಯವಹಾರಗಳು) ನಿಯಮಗಳು, ೨೦೦೦
ಭಾಗ – ೧೧ ಪ್ರವಾಸಕ್ಕೆ ಅಧಿಕೃತ ವ್ಯಾಪಾರಿಗಳಿಂದ ವಿದೇಶೀ ವಿನಿಮಯದ ಬಿಡುಗಡೆ
ಭಾಗ –೧೧೧ ಪ್ರವಾಸಕ್ಕೆ ಪೂರ್ಣ ಪ್ರಮಾಣದ ಹಣ ವಿನಿಮಯ ಕಾರಣದಿಂದ (ಎಫ್‌ಎಫ್‌ಎಂಸಿ ಗಳು) ವಿದೇಶೀ ವಿನಿಮಯ ಬಿಡುಗಡೆ

**ಭಾಗ – ೧**

**ಅಧಿಸೂಚನೆ**

ನವದೆಹಲಿ, ೩ನೇ ಮೇ ೨೦೦೦
(ಅಧಿಸೂಚನೆ ಸಂಖ್ಯೆ ಎಸ್‌ಓ ೩೦೧ (ಇ) ದಿನಾಂಕ ಮಾರ್ಚ್ ೩೦, ೨೦೦೧ ರಿಂದ ತಿದ್ದುಪಡಿಯಾದಂತೆ)

**ಜಿ.ಎಸ್.ಆರ್. ೩೮೧ (ಇ)–** ವಿದೇಶೀ ವಿನಿಮಯ ನಿರ್ವಹಣೆ ಕಾಯಿದೆ, ೧೯೯೯ರ ಪ್ರಕರಣ ೫ ಮತ್ತು ಪ್ರಕರಣ ೪೬ರ (೧) ನೇ ಉಪ ಪ್ರಕರಣ ಹಾಗೂ (೨) ನೇ ಉಪ ಪ್ರಕರಣದ (ಎ) ಖಂಡದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ರಿಸರ್ವ್ ಬ್ಯಾಂಕಿನೊಂದಿಗೆ, ಸಮಾಲೋಚಿಸಿ ಕೇಂದ್ರ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯಿಂದ ಈ ಮುಂದಿನ ನಿಯಮಗಳನ್ನು ರಚಿಸುವುದು ಅವಶ್ಯವೆಂದು ಪರಿಗಣಿಸಿ ಅದರಂತೆ ರಚಿಸುತ್ತದೆ, ಅಂದರೆ:–

೧. **ಚಿಕ್ಕ ಹೆಸರು ಮತ್ತು ಪ್ರಾರಂಭ.---** (೧) ಈ ನಿಯಮಗಳನ್ನು ವಿದೇಶೀ ವಿನಿಮಯ ನಿರ್ವಹಣೆ (ಚಾಲ್ತಿ ಖಾತೆ ವ್ಯವಹಾರಗಳ) ನಿಯಮಗಳು, ೨೦೦೦ ಎಂದು ಕರೆಯತಕ್ಕದ್ದು;

(೨) ಈ ನಿಯಮಗಳು ೧ನೇ ಜೂನ್ ೨೦೦೦ ದಿಂದ ಜಾರಿಗೆ ಬರತಕ್ಕದ್ದು.

**೨. ಪರಿಭಾಷೆಗಳು. ---** ಈ ನಿಯಮಗಳಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,

(ಎ) " **ಅಧಿನಿಯಮ** " ಎಂದರೆ, ವಿದೇಶೀ ವಿನಿಮಯ ನಿರ್ವಹಣೆ ಅಧಿನಿಯಮ, ೧೯೯೯ (೧೯೯೯ರ ೪೨);

(ಬಿ) " **ಹಣ ತೆಗೆಯುವುದು** " ಎಂದರೆ ಒಬ್ಬ ಅಧಿಕೃತ ವ್ಯಕ್ತಿಯಿಂದ ವಿದೇಶೀ ವಿನಿಮಯವನ್ನು ತೆಗೆಯುವುದು ಮತ್ತು ನಂಬಿಕೆ ಪತ್ರ ತೆರೆಯುವುದು ಅಥವಾ ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡ್ ಅಥವಾ ಅಂತರರಾಷ್ಟ್ರೀಯ ಡೆಬಿಟ್ ಕಾರ್ಡ್ ಅಥವಾ ಎಟಿಎಂ ಕಾರ್ಡ್‌ನ ಅಥವಾ ವಿದೇಶೀ ವಿನಿಮಯ ಬಾಧ್ಯತೆಯನ್ನು ಸೃಜಿಸುವ ಪರಿಣಾಮ ಹೊಂದಿರುವಂಥ ಯಾವುದೇ ಹೆಸರಿನಿಂದ ಕರೆಯಲ್ಪಡುವ ಯಾವುದೇ ಇತರ ವಸ್ತು ಇವುಗಳ ಬಳಕೆಯು ಇವು ಸೇರುತ್ತದೆ;

(ಸಿ) " **ಅನುಸೂಚಿ** " ಎಂದರೆ, ಈ ನಿಯಮಗಳಿಗೆ ಅನುಬಂಧಿಸಿರುವ ಅನುಸೂಚಿ;

(ಡಿ) ಈ ನಿಯಮಗಳಲ್ಲಿ ಅರ್ಥ ವಿವರಣೆ ನೀಡದಿರುವ ಆದರೆ ಅಧಿನಿಯಮದಲ್ಲಿ ಅರ್ಥವಿವರಣೆ ನೀಡಿರುವ ಪದಗಳು ಮತ್ತು ಅಭಿವ್ಯಕ್ತಿಗಳು ಅಧಿನಿಯಮದಲ್ಲಿ ಅವುಗಳಿಗೆ ನೀಡಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**೩. ವಿದೇಶೀ ವಿನಿಮಯ ತೆಗೆಯುವುದರ ಮೇಲೆ ನಿಷೇಧ.---** ಯಾರೇ ವ್ಯಕ್ತಿಯು ಈ ಮುಂದಿನ ಉದ್ದೇಶಕ್ಕೆ ವಿದೇಶೀ ವಿನಿಮಯ ತೆಗೆಯುವುದನ್ನು ನಿಷೇಧಿಸಲಾಗಿದೆ, ಅಂದರೆ:

ಬಿ. ಅನುಸೂಚಿ ೧ರಲ್ಲಿ ನಿರ್ದಿಷ್ಟಪಡಿಸಿರುವ ಒಂದು ವ್ಯವಹಾರ; ಅಥವಾ

ಸಿ. ನೇಪಾಳ ಮತ್ತು/ ಅಥವಾ ಭೂತಾನ್‌ಗೆ ಪ್ರವಾಸ; ಅಥವಾ

ಡಿ. ನೇಪಾಳ ಅಥವಾ ಭೂತಾನ್‌ನಲ್ಲಿ ವಾಸವಾಗಿರುವ ಒಬ್ಬ ವ್ಯಕ್ತಿಯೊಂದಿಗೆ ವ್ಯವಹಾರ.

ಆದರೆ, (ಸಿ) ಖಂಡದಲ್ಲಿನ ನಿಷೇಧವನ್ನು ಆರ್‌ಬಿಐ, ವಿಶೇಷ ಅಥವಾ ಸಾಮಾನ್ಯ ಆದೇಶದ ಮೂಲಕ ಗೊತ್ತುಪಡಿಸುವುದು ಅವಶ್ಯವೆಂದು ತಾನು ಪರಿಗಣಿಸುವಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ವಿನಾಯಿತಿಗೊಳಿಸಬಹುದು.

**೪. ಭಾರತ ಸರ್ಕಾರದ ಪೂರ್ವ ಅನುಮೋದನೆ:**

ಯಾರೇ ವ್ಯಕ್ತಿಯು ಅನುಸೂಚಿ ಖಖ ರಲ್ಲಿ ಸೇರಿಸಿರುವ ವ್ಯವಹಾರಕ್ಕೆ ವಿದೇಶೀ ವಿನಿಮಯವನ್ನು ಭಾರತ ಸರ್ಕಾರದ ಪೂರ್ವಾನುಮೋದನೆಯಿಲ್ಲದೆ ತೆಗೆಯತಕ್ಕದ್ದಲ್ಲ. ಆದರೆ, ಈ ನಿಯಮವು ಜಮೆ ಮಾಡುವವನ ನಿವಾಸಿ ವಿದೇಶೀ ಕರೆನ್ಸಿ ಖಾತೆಯಲ್ಲಿ (ಆರ್‌ಎಫ್‌ಸಿ) ಹೊಂದಿರುವ ನಿಧಿಗಳಿಂದ ಹಣ ಸಂದಾಯ ಮಾಡುವಲ್ಲಿ ಅನ್ವಯಿಸಿತಕ್ಕದ್ದಲ್ಲ.

**೫. ರಿಸರ್ವ್ ಬ್ಯಾಂಕ್‌ನ ಪೂರ್ವಾನುಮೋದನೆ.**

ಯಾರೇ ವ್ಯಕ್ತಿಯು ಅನುಸೂಚಿ-ಖಖಖರಲ್ಲಿ ಸೇರಿಸಿರುವ ವ್ಯವಹಾರಕ್ಕೆ ವಿದೇಶೀ ವಿನಿಮಯವನ್ನು ಭಾರತ ಸರ್ಕಾರದ ಪೂರ್ವಾನುಮೋದನೆಯಿಲ್ಲದೆ ತೆಗೆಯತಕ್ಕದ್ದಲ್ಲ. ಆದರೆ, ಈ ನಿಯಮವು ಜಮೆ ಮಾಡುವವನ ನಿವಾಸಿ ವಿದೇಶೀ ಕರೆನ್ಸಿ ಖಾತೆಯಲ್ಲಿ (ಆರ್‌ಎಫ್‌ಸಿ) ಹೊಂದಿರುವ ನಿಧಿಗಳಿಂದ ಹಣ ಸಂದಾಯ ಮಾಡುವಲ್ಲಿ ಅನ್ವಯಿಸಿತಕ್ಕದ್ದಲ್ಲ.

೬. (೧) ನಿಯಮ ೪ ಅಥವಾ ನಿಯಮ ೫ರಲ್ಲಿ ಒಳಗೊಂಡಿರುವ ಯಾವುದನ್ನು ಹಣ ರವಾನೆ ಮಾಡುವವನ ವಿನಿಯಮ ಗಳಿಕೆದಾರರ ವಿದೇಶೀ ಕರೆನ್ಸಿ (ಇಇಎಫ್‌ಸಿ) ಖಾತೆಯಲ್ಲಿ ಹೊಂದಿರುವ ನಿಧಿಗಳಿಂದ ಹಣ ತೆಗೆದದ್ದಕ್ಕೆ ಅನ್ವಯಿಸತಕ್ಕದ್ದಲ್ಲ.

(೨) ಉಪ ನಿಯಮ (೧)ರಲ್ಲಿ ಏನೇ ಒಳಗೊಂಡಿರಲಿ, ವಿನಿಯಮ ಗಳಿಕೆದಾರರ ವಿದೇಶೀ ಕರೆನ್ಸಿ (ಇಇಎಫ್‌ಸಿ) ಖಾತೆಯಿಂದ ವಿದೇಶೀ ವಿನಿಮಯವನ್ನು ಸಂದರ್ಭಾನುಸಾರ ಅನುಸೂಚಿ ಖಖರ ೧೦ ಮತ್ತು ೧೧ನೇ ಬಾಬುಗಳಲ್ಲಿ ಅಥವಾ ಅನುಸೂಚಿ ಖಖಖರ ೩,೪,೧೧,೧೬ ಮತ್ತು ೧೭ನೇ ಬಾಬುಗಳಲ್ಲಿ ನಿರ್ದಿಷ್ಟಪಡಿಸಿರುವ ಉದ್ದೇಶಕ್ಕೆ ತೆಗೆಯಲಾಗಿರುವಲ್ಲಿ ನಿಯಮ ೪ ಅಥವಾ ನಿಯಮ ೫ರ ಅಡಿಯಲ್ಲಿ ವಿಧಿಸಿರುವ ನಿರ್ಬಂಧಗಳನ್ನು,ಅನ್ವಯಿಸುವುದು ಮುಂದುವರಿಯತಕ್ಕದ್ದು.

**ಅನುಸೂಚಿ–೧**
**(ನಿಯಮ ೩ ನೋಡಿ)**

೧. ಲಾಟರಿ ಗೆದ್ದ ಹಣದಿಂದ ಹಣ ರವಾನೆ

೨. ಜೂಜು ಆಡುವುದು/ ಸವಾರಿ ಮಾಡುವುದು ಇತ್ಯಾದಿಗಳಿಂದ ಅಥವಾ ಯಾವುದೇ ಇತರ ಹವ್ಯಾಸದಿಂದ ಗಳಿಸಿದ ಆದಾಯದಿಂದ ರವಾನೆ.

೩. ಲಾಟರಿ ಟಿಕೆಟ್ಟುಗಳು, ನಿಷೇಧಿಸಿರುವ/ ಗೊತ್ತುಪಡಿಸಿದ ಮ್ಯಾಗಝಿನ್‌ಗಳು, ಫುಟ್‌ಬಾಲ್ ಪೂಲ್‌ಗಳ ಖರೀದಿಗೆ, ಬಾಜಿ ಪಂದ್ಯಗಳು ಇತ್ಯಾದಿಗಳಿಗೆ ಹಣ ರವಾನೆ.

೪. ಭಾರತೀಯ ಕಂಪನಿಗಳ ವಿದೇಶಿ ಜಂಟಿ ಉದ್ಯಮಗಳಲ್ಲಿ ಪೂರ್ಣ ಒಡೆತನದ ಅಧೀನ ಘಟಕಗಳಲ್ಲಿ ಈಕ್ವಿಟಿ ಹೂಡುವುದಕ್ಕಾಗಿ ಮಾಡಿದ ರಫ್ತಿನ ಮೇಲೆ ಕಮೀಷನ್ ಸಂದಾಯ.

೫. ಲಾಭಾಂಶ ಸಮತೋಲನದ ಅಗತ್ಯತೆ ಅನ್ವಯವಾಗುವಂತಹ ಯಾವುದೇ ಕಂಪನಿಯಿಂದ ಲಾಭಾಂಶದ ಹಣ ರವಾನೆ.

೬. ರೂಪಾಯಿ ರಾಜ್ಯ ಜಮೆ ಮಾರ್ಗದಡಿಯಲ್ಲಿ ರಫ್ತುಗಳ ಮೇಲೆ ಕಮೀಷನ್ ಸಂದಾಯ.

೭. ದೂರವಾಣಿಗಳ " ಕಾಲ್‌ಬ್ಯಾಕ್ ಸೇವೆಗಳಿಗೆ" ಸಂಬಂಧಿಸಿದ ಸಂದಾಯ.

೮. ಅನಿವಾಸಿ ವಿಶೇಷ ರೂಪಾಯಿ (ಖಾತೆ) ಯೋಜನೆಯಲ್ಲಿ ಹೊಂದಿರುವ ನಿಧಿಗಳಿಂದ ಬಡ್ಡಿ ಆದಾಯದ ರವಾನೆ.

**ಅನುಸೂಚಿ –೧೧**
**(ನಿಯಮ ೪ನ್ನು ನೋಡಿ)**

| | **ರವಾನೆಯ ಉದ್ದೇಶ** | **ಯಾರ ಅನುಮೋದನೆ ಬೇಕಾಗಿದೆಯೋ ಆ ಭಾರತ ಸರ್ಕಾರದ ಆ ಮಂತ್ರಾಲಯ/ಇಲಾಖೆ** |
|---|---|---|
| ೧. | ಸಾಂಸ್ಕೃತಿಕ ಪ್ರವಾಸಗಳು | ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ (ಶಿಕ್ಷಣ ಮತ್ತು ಸಂಸ್ಕೃತಿ ಇಲಾಖೆ) |
| ೨. | ರಾಜ್ಯ ಸರ್ಕಾರ ಮತ್ತು ಅದರ ಸಾರ್ವಜನಿಕ ವಲಯ ಉದ್ಯಮಗಳು ಪ್ರವಾಸೋದ್ಯಮ, ವಿದೇಶೀ ಹೂಡಿಕೆಗಳ ಸಂವರ್ಧನೆ ಮತ್ತು ಅಂತರರಾಷ್ಟ್ರೀಯ ಬಿಡ್ಡಿಂಗ್ (೧೦,೦೦೦ ಅಮೇರಿಕಾ ಡಾಲರ್‌ಗಳಿಗೆ ಮೀರಿದ) ಇವುಗಳಲ್ಲದ ಉದ್ದೇಶಗಳಿಗಾಗಿ ವಿದೇಶೀ ಮುದ್ರಣ ಮಾಧ್ಯಮದಲ್ಲಿ ಜಾಹೀರಾತು. | ಹಣಕಾಸು ಮಂತ್ರಾಲಯ (ಆರ್ಥಿಕ ವ್ಯವಹಾರಗಳ ಇಲಾಖೆ) |
| ೩. | ಪಿಎಸ್‌ಯುಗಳು ಬಾಡಿಗೆಗೆ ಪಡೆದಿರುವ ನೌಕೆಯ ಬಾಡಿಗೆ ಹಣ ರವಾನೆ | ಭೂ ಸಾರಿಗೆ ಮಂತ್ರಾಲಯ (ಬಾಡಿಗೆಗೆ ನೀಡುವ ವಿಭಾಗ) |
| ೪. | ಒಂದು ಸರ್ಕಾರಿ ಇಲಾಖೆ ಅಥವಾ ಒಂದು ಪಿಎಸ್‌ಯು ಯಿಂದ ಸಿ.ಐ.ಎಫ್ ಆಧಾರದ ಮೇಲೆ ಆಮದು ಹಣದ ಸಂದಾಯ (ಅಂದರೆ ಎಫ್‌ಒಬಿ ಮತ್ತು ಎಫ್‌ಎಎಸ್ ಹೊರತುಪಡಿಸಿ) | ಭೂ ಸಾರಿಗೆ ಮಂತ್ರಾಲಯ (ಬಾಡಿಗೆಗೆ ನೀಡುವ ವಿಭಾಗ) |
| ೫. | ವಿದೇಶದಲ್ಲಿರುವ ತಮ್ಮ ಏಜೆಂಟರುಗಳಿಗೆ ಹಣ ರವಾನೆ ಮಾಡುವ ಬಹು ಮಾದರಿ ಸಾರಿಗೆ ಪ್ರವರ್ತಕರು | ನೌಕೆಗಳ ಮಹಾ ನಿರ್ದೇಶಕರಿಂದ ನೋಂದಣಿ ಪ್ರಮಾಣ ಪತ್ರ |
| ೬. | ಟ್ರಾನ್ಸ್‌ಪಾಂಡರ್‌ಗಳ ಬಾಡಿಗೆ ವೆಚ್ಚಗಳ ರವಾನೆ | ಹಣಕಾಸು ಮಂತ್ರಾಲಯ (ಆರ್ಥಿಕ ವ್ಯವಹಾರಗಳ ಇಲಾಖೆ) |
| ೭. | ನೌಕೆಗಳ ಮಹಾನಿರ್ದೇಶಕರು ಗೊತ್ತುಪಡಿಸಿದ ದರಕ್ಕೆ ಮೀರಿದ ಧಾರಕವನ್ನು ಹಿಡಿದಿರಿಸಿದ ವೆಚ್ಚಗಳ ರವಾನೆ | ಭೂ ಸಾರಿಗೆ ಮಂತ್ರಾಲಯ (ನೌಕೆಗಳ ಮಹಾ ನಿರ್ದೇಶಕರು) |
| ೮. | ರಾಜಧನ ಸಂದಾಯವು ಸ್ಥಳೀಯ ಮಾರಾಟಗಳ ಮೇಲೆ ಶೇ. ೫ ಮತ್ತು ರಫ್ತುಗಳ ಮೇಲೆ ಶೇ. ೮ಕ್ಕೆ ಮೀರಿದ ಹಾಗೂ ೨ ದಶಲಕ್ಷ ಅಮೇರಿಕಾ ಡಾಲರ್ ಮೀರಿದ ಇಡಿಗಂಟು ಸಂದಾಯ ಮಾಡಲಾಗುವಂಥ ತಾಂತ್ರಿಕ ಸಹಯೋಗ ಒಪ್ಪಂಗಳ ಅಡಿಯಲ್ಲಿ ರವಾನೆಗಳು | ಕೈಗಾರಿಕಾ ಮತ್ತು ವಾಣಿಜ್ಯ ಮಂತ್ರಾಲಯ |

| | | |
|---|---|---|
| ೯. | ಅಂತರರಾಷ್ಟ್ರೀಯ/ರಾಷ್ಟ್ರೀಯ/ ರಾಜ್ಯ ಮಟ್ಟದ ಕ್ರೀಡಾ ಸಂಸ್ಥೆಗಳನ್ನು ಹೊರತುಪಡಿಸಿ ಒಬ್ಬ ವ್ಯಕ್ತಿಯಿಂದ ವಿದೇಶದಲ್ಲಿ ಬಹುಮಾನದ ಹಣದ ರವಾನೆ /ಕ್ರೀಡಾ ಚಟುವಟಿಕೆಯ ಪ್ರಾಯೋಜಕತ್ವ | ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ (ಯುವ ಜನ ವ್ಯವಹಾರ ಮತ್ತು ಕ್ರೀಡಾ ಇಲಾಖೆ) |
| ೧೦. | ವಿದೇಶೀ ಕಂಪನಿಯಿಂದ ಆರೋಗ್ಯ ವಿಮೆ ಪಡೆಯಲು ಹಣ ಸಂದಾಯ | ಹಣಕಾಸು ಮಂತ್ರಾಲಯ (ವಿಮೆ ವಿಭಾಗ) |
| ೧೧. | ಪಿ ಮತ್ತು ಐ ಕ್ಲಬ್‌ನ ಸದಸ್ಯತ್ವಕ್ಕೆ ಹಣ ರವಾನೆ | ಹಣಕಾಸು ಮಂತ್ರಾಲಯ (ವಿಮೆ ವಿಭಾಗ) |

**ಅನುಸೂಚಿ–೧೧೧**
**(ನಿಯಮ ೫ ನೋಡಿ)**

೧. ಕಲಾವಿದರಿಂದ ಉದಾಹರಣೆಗೆ ಕುಸ್ತಿಪಟುಗಳು, ನರ್ತಕ– ನರ್ತಕಿಯರು, ಮನೋರಂಜನಕಾರರು ಮುಂತಾದವರಿಂದ ಹಣದ ರವಾನೆ (ಐಟಿಡಿಸಿ, ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಮುಂತಾದಂಥ ಭಾರತದಲ್ಲಿನ ಪ್ರವಾಶೋದ್ಯಮ ಸಂಬಂಧಿ ಸಂಸ್ಥೆಗಳು ವಿಶೇಷ ಉತ್ಸವಗಳ ಸಂದರ್ಭದಲ್ಲಿ ನೇಮಕ ಮಾಡಿಕೊಂಡ ಕಲಾವಿದರಿಗೆ ಅಥವಾ ಪಂಚತಾರಾ ಪ್ರವರ್ಗಗಳ ಹೋಟೆಲುಗಳು ನೇಮಿಸಿಕೊಂಡಂಥ ಕಲಾವಿದರಿಗೆ ಈ ನಿರ್ಬಂಧಗಳು ಅನ್ವಯಿಸುವುದಿಲ್ಲ. ಆದರೆ ವೆಚ್ಚವನ್ನು ಇಇಎಫ್‌ಸಿ ಖಾತೆಯಿಂದ ಭರಿಸಬೇಕು)

೨. ಒಂದು ಕ್ಯಾಲೆಂಡರ್ ವರ್ಷದಲ್ಲಿ ಯಾವುದೇ ದೇಶಕ್ಕೆ (ನೇಪಾಳ ಮತ್ತು ಭೂತಾನ್ ಹೊರತುಪಡಿಸಿ) ಒಂದು ಅಥವಾ ಹೆಚ್ಚು ಖಾಸಗಿ ಭೇಟಿ ನೀಡುವುದಕ್ಕೆ ೫೦೦೦ ಅಮೇರಿಕಾ ಡಾಲರ್ ಅಥವಾ ಸಮಾನವಾದ ಮೊತ್ತವನ್ನು ಮೀರಿದ ವಿದೇಶೀ ವಿನಿಮಯದ ಬಿಡುಗಡೆ.

೩. ಪ್ರತಿಯೊಬ್ಬ ಹಣ ರವಾನೆದಾರನಿಗೆ/ದಾನಿಗೆ ಪ್ರತಿ ವರ್ಷಕ್ಕೆ ೫೦೦೦ ಅಮೇರಿಕಾ ಡಾಲರ್ ಮೀರಿದ ದೇಣಿಗೆಯ ರವಾನೆ.

೪. ಪ್ರತಿಯೊಬ್ಬ ಹಣ ರವಾನೆದಾರನಿಗೆ/ದಾನಿಗೆ ಪ್ರತಿ ವರ್ಷಕ್ಕೆ ೫೦೦೦ ಅಮೇರಿಕಾ ಡಾಲರ್ ಮೀರಿದ ದೇಣಿಗೆ.

೫. ಉದ್ಯೋಗಕ್ಕಾಗಿ ವಿದೇಶಕ್ಕೆ ಹೋಗುವ ವ್ಯಕ್ತಿಗಳಿಗೆ ೫೦೦೦ ಅಮೇರಿಕಾ ಡಾಲರ್‌ಗೆ ಮೀರಿದ ವಿನಿಮಯ ಸೌಲಭ್ಯಗಳು.

೬. ೫೦೦೦ ಅಮೇರಿಕಾ ಡಾಲರ್‌ಗೆ ಮೀರಿದ ಅಥವಾ ವಲಸೆ ಹೋಗುತ್ತಿರುವ ದೇಶವು ನಿರ್ದಿಷ್ಟಪಡಿಸಿದ ಹಣವನ್ನು ಮೀರಿದ ವಲಸೆಗೆ ವಿನಿಮಯ ಸೌಲಭ್ಯಗಳು.

೭. ವಿದೇಶದಲ್ಲಿ ಹತ್ತಿರದ ಸಂಬಂಧಿಗಳ ನಿರ್ವಹಣೆಗೆ.

(೧) ಭಾರತದ ನಿವಾಸಿಯಾಗಿರುವ ಆದರೆ ಶಾಶ್ವತವಾಗಿ ನಿವಾಸಿಯಾಗದಿರುವ ಮತ್ತು ಪಾಕಿಸ್ತಾನವನ್ನು ಹೊರತುಪಡಿಸಿ ವಿದೇಶದ ನಾಗರಿಕನಾಗಿರುವ ಒಬ್ಬ ವ್ಯಕ್ತಿಯ ನಿವ್ವಳ ಸಂಬಳವನ್ನು (ತೆರಿಗೆಗಳನ್ನು,

ಭವಿಷ್ಯನಿಧಿಗೆ ಕೊಡುಗೆ ಮತ್ತು ಇತರ ಕಟಾವಣೆಗಳನ್ನು ಮಾಡಿದ ನಂತರ) ಮೀರಿದ ಹಣದ ರವಾನೆ.

(ii) ಉಳಿದ ಎಲ್ಲ ಪ್ರಕರಣಗಳಲ್ಲಿ ಪ್ರತಿ ಸ್ವೀಕರ್ತನಿಗೆ ಒಂದು ವರ್ಷಕ್ಕೆ ೫೦೦೦ ಅಮೇರಿಕಾ ಡಾಲರ್‌ಗಳನ್ನು ಮೀರಿದ ಹಣದ ರವಾನೆ.

ವಿವರಣೆ: ಈ ಬಾಬಿನ ಉದ್ದೇಶಕ್ಕಾಗಿ, ಒಂದು ನಿರ್ದಿಷ್ಟ ಅವಧಿಯ (ಅದರ ವ್ಯಾಪ್ತಿ ಎಷ್ಟೇ ಇರಲಿ) ಉದ್ಯೋಗದ ಕಾರಣದಿಂದಾಗಿ ಅಥವಾ ನಿರ್ದಿಷ್ಟ ಹುದ್ದೆಗಾಗಿ ಅಥವಾ ವಹಿಸಿದ ಕೆಲಸಕ್ಕಾಗಿ, ವಾಸದ ಅವಧಿಯು ಮೂರು ವರ್ಷಗಳನ್ನು ಮೀರಬಾರದು ಭಾರತದಲ್ಲಿ ವಾಸವಾಗಿರುವ ಒಬ್ಬ ವ್ಯಕ್ತಿಯು, ಒಬ್ಬ ನಿವಾಸಿಯಾಗುತ್ತಾನೆ. ಆದರೆ ಶಾಶ್ವತವಾಗಿ ನಿವಾಸಿಯಾಗುವುದಿಲ್ಲ.

೮. ವ್ಯಾಪಾರೋದ್ದೇಶಿತ ಪ್ರವಾಸಕ್ಕಾಗಿ ಅಥವಾ ಸಮ್ಮೇಳನ ಅಥವಾ ತಜ್ಞ ತರಬೇತಿಯಲ್ಲಿ ಭಾಗವಹಿಸುವುದಕ್ಕಾಗಿ ಅಥವಾ ವಿದೇಶದಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ ಅಥವಾ ಆರೋಗ್ಯತಪಾಸಣೆಗಾಗಿ ವಿದೇಶಕ್ಕೆ ಹೋಗುತ್ತಿರುವ ಒಬ್ಬ ರೋಗಿಯ ಅಥವಾ ವೈದ್ಯಕೀಯ ಚಿಕಿತ್ಸೆ/ ತಪಾಸಣೆಗಾಗಿ ವಿದೇಶಕ್ಕೆ ಹೋಗುತ್ತಿರುವ ರೋಗಿಯ ಸಹಾಯಕನಾಗಿ ರೋಗಿಯ ಜೊತೆ ಹೋಗುವುದಕ್ಕಾಗಿ ಆಗುವ ನಿರ್ವಹಣಾ ವೆಚ್ಚಕ್ಕಾಗಿ, ತಂಗುವ ಅವಧಿಯನ್ನು ಗಣನೆಗೆ ತೆಗೆದುಕೊಳ್ಳದೆ, ಒಬ್ಬ ವ್ಯಕ್ತಿಗೆ, ೨೫,೦೦೦ ಅಮೇರಿಕಾ ಡಾಲರ್‌ಗೆ ಮೀರಿದ ವಿದೇಶೀ ವಿನಿಮಯ ಬಿಡುಗಡೆ.

೯. ಭಾರತದಲ್ಲಿನ ವೈದ್ಯರು ಅಥವಾ ವಿದೇಶದಲ್ಲಿನ ಆಸ್ಪತ್ರೆ/ ವೈದ್ಯರು ನೀಡಿದ ಅಂದಾಜಿಗೆ ಮೀರಿದ ವಿದೇಶದಲ್ಲಿನ ವೈದ್ಯಕೀಯ ಚಿಕಿತ್ಸೆಗಾಗಿ ಆದ ವೆಚ್ಚವನ್ನು ಭರಿಸುವುದಕ್ಕಾಗಿ ವಿದೇಶೀ ವಿನಿಮಯದ ಬಿಡುಗಡೆ.

೧೦. ವಿದೇಶದಲ್ಲಿ ಅಧ್ಯಯನಕ್ಕಾಗಿ ವಿದೇಶದಲ್ಲಿನ ಸಂಸ್ಥೆಯು ಮಾಡಿದ ಅಂದಾಜಿಗೆ ಮೀರಿದ ಮೊತ್ತ ಅಥವಾ ಪ್ರತಿವರ್ಷಕ್ಕೆ ೩೦,೦೦೦ ಅಮೇರಿಕಾ ಡಾಲರ್ ಇವುಗಳಲ್ಲಿ ಯಾವುದು ಹೆಚ್ಚೋ ಅಷ್ಟು ವಿನಿಯಮದ ಬಿಡುಗಡೆ.

೧೧. ಭಾರತದಲ್ಲಿನ ವಾಸದ ಪ್ಲ್ಯಾಟ್‌ಗಳ/ ವಾಣಿಜ್ಯ ಪ್ಲಾಟ್‌ಗಳ ಮಾರಾಟಕ್ಕಾಗಿ ವಿದೇಶೀ ಏಜೆಂಟರುಗಳಿಗೆ ಇನ್‌ವರ್ಡ್ ರವಾನೆಯ ಶೇ ೫ ಕ್ಕೆ ಮೀರಿದ ಕಮೀಷನ್.

೧೨. ಭಾರತೀಯ ಕಂಪನಿಗಳ ಸಾಗರೋತ್ತರ ಕಚೇರಿಗಳಿಗೆ ಅಲ್ಪಾವಧಿ ಸಾಲ (ಜಮೆ).

೧೩. ಯಾರ ರಫ್ತು ಗಳಿಕೆ ಹಿಂದಿನ ಎರಡು ವರ್ಷಗಳಲ್ಲಿ ಪ್ರತಿಯೊಂದು ವರ್ಷದಲ್ಲಿ ೧೦ ಲಕ್ಷ ರೂಪಾಯಿಗಳಿಂತ ಕಡಿಮೆ ಇದೆಯೋ ಆ ವ್ಯಕ್ತಿಯಿಂದ ವಿದೇಶೀ ಟೆಲಿವಿಷನ್‌ನಲ್ಲಿ ಜಾಹೀರಾತಿಗಾಗಿ ಹಣದ ರವಾನೆ.

೧೪. ರಿಸರ್ವ್ ಬ್ಯಾಂಕ್‌ನಲ್ಲಿ ನೋಂದಾಯಿಸಿರದ ತಾಂತ್ರಿಕ ಸಹಯೋಗ ಒಪ್ಪಂದದ ಅಡಿಯಲ್ಲಿ ರಾಜಧನ ರವಾನೆ ಮತ್ತು ಇಡಿಗಂಟು ಶುಲ್ಕ ಸಂದಾಯ.

೧೫. ಭಾರತದ ಹೊರಗೆ ಪಡೆದ ಯಾವುದೇ ಸಮಾಲೋಚನಾ ಸೇವೆಗಾಗಿ ಪ್ರತಿಯೊಂದು ಯೋಜನೆಗೆ ೧,೦೦,೦೦೦ ಅಮೇರಿಕಾ ಡಾಲರ್ ಮೀರಿದ ಹಣದ ಜಮೆ.

೧೬. ಭಾರತದಲ್ಲಿ ವ್ಯಾಪಾರ ಚಿಹ್ನೆ/ ಫ್ರಾಂಚೈಸ್‌ನ ಬಳಕೆಗಾಗಿ ಮತ್ತು / ಅಥವಾ ಖರೀದಿಗಾಗಿ ಹಣದ ರವಾನೆ.

೧೭. ಪೂರ್ವ ನಿಗಮಿತ ವೆಚ್ಚಗಳನ್ನು ತುಂಬಿಕೊಡುವ ರೂಪದಲ್ಲಿ ಭಾರತದಲ್ಲಿನ ಒಂದು ಎಂಟಿಟಿಯಿಂದ ೧೦೦೦೦೦ ಅಮೇರಿಕಾ ಡಾಲರ್‌ಗೆ ಮೀರಿದ ಹಣದ ರವಾನೆ.

## ಭಾಗ ಖಖ

## ಅಧಿಕೃತ ವ್ಯಾಪಾರಿಗಳಿಂದ ವಿದೇಶೀ ವಿನಿಮಯದ ಬಿಡುಗಡೆ

### ಎ–೧ ಸಾಮಾನ್ಯ

(ಎ) ಭಾರತದ ನಿವಾಸಿಗಳಾಗಿರುವ ವ್ಯಕ್ತಿಗಳಿಗೆ ವಿದೇಶ ಪ್ರವಾಸಕ್ಕಾಗಿ ವಿದೇಶೀ ವಿನಿಮಯ ಬಿಡುಗಡೆ ಮಾಡುವುದಕ್ಕೆ ವಿದೇಶೀ ವಿನಿಮಯ ನಿರ್ವಹಣೆ ಅಧಿನಿಯಮ, ೧೯೯೯ರ ೫ನೇ ಪ್ರಕರಣದ ಮೇರೆಗೆ ಭಾರತ ಸರ್ಕಾರವು ರಚಿಸಿರುವ ನಿಯಮಗಳನ್ನು ಅಧಿಕೃತ ವ್ಯಾಪಾರಿಗಳು ಅನುಸರಿಸತಕ್ಕದ್ದು. ಸರ್ಕಾರದ ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ ೩೮೧ (ಇ) ದಿನಾಂಕ ೩ನೇ ಮೇ ೨೦೦೦ ದ ನಿಯಮ ೩ರ ಬಾಬು (ಬಿ) ಅನ್ವಯ ನೇಪಾಳ ಮತ್ತು ಭೂತಾನ್‌ಗೆ ಪ್ರಯಾಣ ಮಾಡಲು ಯಾವುದೇ ವಿದೇಶೀ ವಿನಿಮಯ ಬಿಡುಗಡೆ ಅನುಮತೀಯವಲ್ಲ. ಅಧಿಸೂಚನೆಯ ಅನುಸೂಚಿ ಖಖಖ ರಲ್ಲಿ ನಿರ್ದಿಷ್ಟಪಡಿಸಿರುವಂತೆ, ಕೆಲವು ಮಿತಿಗಳನ್ನು ಮೀರಿ ವಿದೇಶೀ ವಿನಿಮಯ ಬಿಡುಗಡೆ ಮಾಡುವುದಕ್ಕೆ ರಿಸರ್ವ್ ಬ್ಯಾಂಕ್‌ನ ಪೂರ್ವಾನುಮೋದನೆಯನ್ನು ಪಡೆದುಕೊಳ್ಳತಕ್ಕದ್ದು. ಸರ್ಕಾರದ ಅಧಿಸೂಚನೆಯ ಅನುಸೂಚಿ ಖಖಖ ರಲ್ಲಿ ನಿರ್ದಿಷ್ಟಪಡಿಸಿರುವ ಮಿತಿಗಳನ್ನು ಮೀರಿ ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದ ಅರ್ಜಿಗಳನ್ನು, ಯಾರ ಕಚೇರಿಯ ಕಾರ್ಯವ್ಯಾಪ್ತಿಯಲ್ಲಿ ಅರ್ಜಿದಾರ ಕಾರ್ಯನಿರ್ವಹಿಸುತ್ತಿದ್ದಾನೋ/ ವಾಸಿಸುತ್ತಿದ್ದಾನೋ ಅಂಥ ವಿನಿಮಯ ನಿಯಂತ್ರಣ ಇಲಾಖೆಯ ಪ್ರಾದೇಶಿಕ ಕಚೇರಿಗೆ ಕಳುಹಿಸಿಕೊಡತಕ್ಕದ್ದು.

(ಬಿ) ಸರ್ಕಾರದ ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ ೩೮೧ (ಇ) ದಿನಾಂಕ ೩ನೇ ಮೇ ೨೦೦೦ದ ನಿಯಮ (೨) ರ (ಬಿ) ಖಂಡದ ಅನ್ವಯ " ಹಣ ತೆಗೆಯುವುದು" ಎಂಬುದರಲ್ಲಿ ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡ್‌ಗಳು, ಅಂತರರಾಷ್ಟ್ರೀಯ ಡೆಬಿಟ್ ಕಾರ್ಡ್‌ಗಳು, ಎಟಿಎಂ ಕಾರ್ಡ್‌ಗಳು ಮುಂತಾದವುಗಳ ಬಳಕೆಯು ಸೇರುತ್ತದೆ. ಆದ್ದರಿಂದ ಈ ಸಾಧನಗಳನ್ನು ಬಳಸುವುದು ಅಧಿಸೂಚನೆಯ ಅಡಿಯಲ್ಲಿ ವಿಧಿಸಿರುವ ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ. ಅಲ್ಲದೆ " ವಿದೇಶೀ ವಿನಿಮಯ ನಿರ್ವಹಣೆ ಅಧಿನಿಯಮ, ೧೯೯೯ರ ೨ ನೇ ಪ್ರಕರಣದ (ಹೆಚ್) ಖಂಡದ ಅನ್ವಯ ' ಕರೆನ್ಸಿ ' ಎಂಬುದು ಇತರೆಯವುಗಳ ಜೊತೆಗೆ ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡ್ ಗಳನ್ನು ಒಳಗೊಳ್ಳುತ್ತದೆ. ರಿಸರ್ವ್ ಬ್ಯಾಂಕು, ತನ್ನ ಅಧಿಸೂಚನೆ ಸಂಖ್ಯೆ ಎಫ್‌ಇಎಂಎ ೧೫/ ೨೦೦೦–ಆರ್‌ಬಿ ದಿನಾಂಕ ೩ನೇ ಮೇ ೨೦೦೦ ದಲ್ಲಿ ಎಟಿಎಂ ಕಾರ್ಡ್‌ಗಳನ್ನು ಮತ್ತು ಡೆಬಿಟ್ ಕಾರ್ಡ್‌ಗಳನ್ನು "ಕರೆನ್ಸಿ " ಎಂದು ಅಧಿಸೂಚಿಸಿದೆ. ಅದರಂತೆ, ಕ್ರೆಡಿಟ್ ಕಾರ್ಡ್ ಗಳು, ಎಟಿಎಂ ಕಾರ್ಡುಗಳು ಮತ್ತು ಡೆಬಿಟ್ ಕಾರ್ಡುಗಳು ಮುಂತಾದವುಗಳ ಮೂಲಕ ಮಾಡಿದ ಸಂದಾಯಗಳು ಹಣ ಸಂದಾಯದ ಬೇರೆ ವಿಧಾನಗಳು ಮಾತ್ರ ಆಗಿರುವುದರಿಂದ ಅಧಿನಿಯಮದ ಅಡಿಯಲ್ಲಿ ರಚಿಸಿದ ಎಲ್ಲ ನಿಯಮ ನಿಬಂಧನೆಗಳು ಹಾಗೂ ನೀಡಿದ ನಿರ್ದೇಶನಗಳು ಕ್ರೆಡಿಟ್ ಕಾರ್ಡ್‌ಗಳು, ಎಟಿಎಂ ಕಾರ್ಡ್‌ಗಳು, ಡೆಬಿಟ್ ಕಾರ್ಡ್‌ಗಳು ಮುಂತಾದವುಗಳಿಗೂ ಸಹಾ ಅನ್ವಯಿಸುತ್ತವೆ.

### ಎ–೨ ವಿದೇಶೀ ವಿನಿಮಯದ ಮಾರಾಟ

ಎ. ರಿಸರ್ವ್ ಬ್ಯಾಂಕು/ ಭಾರತ ಸರ್ಕಾರವು ಅನುಮತಿ ಪತ್ರಗಳನ್ನು/ ಅನುಮೋದನಾ ಪತ್ರಗಳನ್ನು ನೀಡಿರುವಲ್ಲಿ, ಅನುಮತಿ ಪತ್ರದಲ್ಲಿ/ ಅನುಮೋದನಾ ಪತ್ರದಲ್ಲಿ ತಿಳಿಸಿರುವ ಸಿಂಧುತ್ವ ಅವಧಿಯೊಳಗೆ ವಿದೇಶೀ ವಿನಿಮಯವನ್ನು ಮಾರಾಟ ಮಾಡತಕ್ಕದ್ದು ಮತ್ತು ಅನುಮತಿ ಪತ್ರದ/ ಮೂಲ ಅನುಮೋದನೆ ಪತ್ರದ ಹಿಂಬದಿಯಲ್ಲಿ ಮಾರಾಟವನ್ನು ನಮೂದಿಸತಕ್ಕದ್ದು.

ಬಿ. ಒಂದು ಕ್ಯಾಲೆಂಡರ್ ವರ್ಷದಲ್ಲಿ ಬಳಸಿಕೊಂಡ ವಿದೇಶೀ ವಿನಿಮಯ ಮೊಬಲಗಿಗೆ ಸಂಬಂಧಿಸಿದಂತೆ ಪ್ರವಾಸಿಯು ನೀಡಿದ ಘೋಷಣೆಯ ಆಧಾರದ ಮೇಲೆ ಅಧಿಕೃತ ವ್ಯಾಪಾರಿಗಳು ಪ್ರವಾಸೋಧ್ಯಮ ಮತ್ತು ಖಾಸಗಿ ಉದ್ದೇಶಕ್ಕಾಗಿ ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡಬಹುದು.

ಸಿ. ಅಧಿಕೃತ ವ್ಯಾಪಾರಿಗಳು, ವಿದೇಶ ಪ್ರಯಾಣಕ್ಕಾಗಿ ಮಾರಾಟ ಮಾಡಿದ ವಿದೇಶೀ ವಿನಿಮಯದ ಬಗ್ಗೆ ಪ್ರವಾಸಿಗಳ ಪಾಸ್‌ಪೋರ್ಟ್‌ನಲ್ಲಿ ನಮೂದು ಮಾಡುವ ಅಗತ್ಯವಿಲ್ಲ. ಆದರೆ, ಪ್ರವಾಸಿಯು ಕೋರಿದರೆ, ಪ್ರವಾಸಿಗೆ ಮಾರಾಟ ಮಾಡಿದ ವಿದೇಶೀ ವಿನಿಮಯದ ವಿವರಗಳನ್ನು ಅವರು ದಾಖಲಿಸಿ ತಮ್ಮ ಮೊಹರು, ದಿನಾಂಕ ಮತ್ತು ಸಹಿ ಹಾಕತಕ್ಕದ್ದು.

ಡಿ. ಟ್ರ್ಯಾವಲರ್ಸ್ ಚೆಕ್‌ಗಳ ವಿಷಯದಲ್ಲಿ, ಪ್ರವಾಸಿಯು, ಅಧಿಕೃತ ನೌಕರನ ಸಮ್ಮುಖದಲ್ಲಿ ಚೆಕ್‌ಗಳಿಗೆ ಸಹಿ ಹಾಕತಕ್ಕದ್ದು ಮತ್ತು ಟ್ರ್ಯಾವಲರ್ಸ್ ಚೆಕ್‌ಗಳನ್ನು ಪಡೆದದ್ದಕ್ಕೆ ಖರೀದಿದಾರನಿಂದ ಸ್ವೀಕೃತಿಯನ್ನು ಪಡೆದು ಯುಕ್ತವಾಗಿ ನಿರ್ವಹಿಸತಕ್ಕದ್ದು.

ಇ. ಒಬ್ಬ ಪ್ರವಾಸಿಗೆ ಮಾರಾಟ ಮಾಡಲಾಗುತ್ತಿರುವ ಒಟ್ಟಾರೆ ವಿದೇಶೀ ವಿನಿಮಯದ ಪೈಕಿ, ವಿದೇಶಿ ಚಲಾವಣೆಯ ನೋಟುಗಳು ಮತ್ತು ನಾಣ್ಯಗಳ ರೂಪದಲ್ಲಿ ವಿದೇಶೀ ವಿನಿಮಯವನ್ನು ಕೆಳಗೆ ಸೂಚಿಸಿರುವ ಪರಿಮಿತಿಯವರೆಗೆ ಮಾರಾಟ ಮಾಡಬಹುದು.

| | | |
|---|---|---|
| (೧) | ಇರಾಕ್, ಲಿಬಿಯಾ, ಇರಾನ್, ರಷಿಯಾ ಮತ್ತು ಇತರ ಸ್ವತಂತ್ರ ರಾಜ್ಯಗಳ ಕಾಮನ್ ವೆಲ್ತ್ ರಿಪಬ್ಲಿಕ್‌ಗಳನ್ನು ಹೊರತುಪಡಿಸಿ ಇತರ ದೇಶಗಳಿಗೆ ಹೋಗುತ್ತಿರುವ ಪ್ರವಾಸಿಗಳು | ೫೦೦ ಅಮೇರಿಕಾ ಡಾಲರ್ ಅಥವಾ ಅದಕ್ಕೆ ಸಮಾನವಾದ ಮೊತ್ತವನ್ನು ಮೀರದಷ್ಟು |
| (೨) | ಇರಾಕ್ ಮತ್ತು ಲಿಬಿಯಾಗೆ ಹೋಗುತ್ತಿರುವ ಪ್ರವಾಸಿಗಳು | ೫೦೦ ಅಮೇರಿಕಾ ಡಾಲರ್ ಅಥವಾ ಅದಕ್ಕೆ ಸಮಾನವಾದ ಮೊತ್ತವನ್ನು ಮೀರದಷ್ಟು |
| (೩) | ಇರಾಕ್, ರಷಿಯಾ ಮತ್ತು ಇತರ ಸ್ವತಂತ್ರ ರಾಜ್ಯಗಳ ಕಾಮನ್ ವೆಲ್ತ್ ರಿಪಬ್ಲಿಕ್‌ಗಳನ್ನು ಹೊರತುಪಡಿಸಿ ಇತರ ದೇಶಗಳಿಗೆ ಹೋಗುತ್ತಿರುವ ಪ್ರವಾಸಿಗರು | ಪೂರ್ಣ ವಿನಿಮಯ ಬಿಡುಗಡೆ |

(ಎಫ್) ವಿದೇಶ ಪ್ರಯಾಣಕ್ಕೆ ವಿದೇಶೀ ವಿನಿಮಯದ ಮಾರಾಟಕ್ಕೆ ಸಂಬಂಧಿಸಿದ ನಮೂನೆ ಎ೨ ನ್ನು ಅಧಿಕೃತ ವ್ಯಕ್ತಿಗಳು, ತಮ್ಮ ಆಂತರಿಕ ಲೆಕ್ಕಪರಿಶೋಧಕರಿಂದ ಪರಿಶೀಲನೆಯ ಉದ್ದೇಶಕ್ಕಾಗಿ ಸಂಬಂಧಪಟ್ಟ ದಾಖಲೆಗಳೊಂದಿಗೆ ಒಂದು ವರ್ಷದ ಅವಧಿ ತಮ್ಮಲ್ಲಿ ಉಳಿಸಿಕೊಳ್ಳತಕ್ಕದ್ದು.

## ಎ–೩ ವೈದ್ಯಕೀಯ ಚಿಕಿತ್ಸೆ

ವಿದೇಶಕ್ಕೆ ಹೋದ ನಂತರ ಒಬ್ಬ ವ್ಯಕ್ತಿ ಖಾಯಿಲೆ ಬಿದ್ದಲ್ಲಿ ಆತನಿಗೆ ಭಾರತದ ಹೊರಗೆ ವೈದ್ಯಕೀಯ ಚಿಕಿತ್ಸೆಗಾಗಿ ವಿದೇಶೀ ವಿನಿಮಯವನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ ೩೮೧ (ಇ) ದಿನಾಂಕ ೩ನೇ ಮೇ ೨೦೦೦ ದ ನಿಯಮ ೫ರ ಅನುಸಾರವಾಗಿ ಬಿಡುಗಡೆ ಮಾಡತಕ್ಕದ್ದು.

## ಎ–೪. ಸಾಂಸ್ಕೃತಿಕ ಪ್ರವಾಸಗಳು

ಸಾಂಸ್ಕೃತಿಕ ಉದ್ದೇಶಗಳಿಗಾಗಿ ವಿದೇಶ ಪ್ರವಾಸ ಮಾಡಲು ಉದ್ದೇಶಿಸಿದ ನೃತ್ಯ ತಂಡಗಳು, ಕಲಾವಿದರು ಮುಂತಾದವರು ಅವರ ವಿದೇಶೀ ವಿನಿಮಯ ಅಗತ್ಯತೆಗಳಿಗೆ ಸಂಬಂಧಿಸಿದಂತೆ ಶಿಫಾರಸು ಮಾಡುವುದಕ್ಕಾಗಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಮಂತ್ರಾಲಯಕ್ಕೆ (ಶಿಕ್ಷಣ ಮತ್ತು ಸಂಸ್ಕೃತಿ ಇಲಾಖೆ) ಅರ್ಜಿ ಸಲ್ಲಿಸತಕ್ಕದ್ದು. ಮಂತ್ರಾಲಯವು ನೀಡಿದ ಮಂಜೂರಾತಿಯ ಬಲದ ಮೇಲೆ ಅದರಲ್ಲಿ ಸೂಚಿಸಿರುವ ಪ್ರಮಾಣದಷ್ಟು ವಿದೇಶೀ ವಿನಿಮಯವನ್ನು ಅದರಲ್ಲಿ ಸೂಚಿಸಿರುವ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಬಹುದು.

## ಎ–೫. ಖಾಸಗಿ ಭೇಟಿಗಳು

ಯಾವುದೇ ಉದ್ದೇಶಕ್ಕಾಗಿ ಭಾರತ ಹೊರಗೆ ಪ್ರವಾಸ ಮಾಡಲು ವಿದೇಶೀ ವಿನಿಮಯವನ್ನು ಬಳಸಿಕೊಳ್ಳುತ್ತಿರುವ ಒಬ್ಬ ವ್ಯಕ್ತಿಗೆ ಖಾಸಗಿ ಭೇಟಿಗಾಗಿ ಸಹಾ ವಿದೇಶೀ ವಿನಿಮಯವನ್ನು ಬಿಡುಬಡೆ ಮಾಡಬಹುದು.

## ಎ–೬. ಕೆಲವು ಪ್ರಕರಣಗಳಲ್ಲಿ ವಿದೇಶೀ ವಿನಿಮಯದ ಬಳಕೆಯ ಅನುಸರಣೆ

ಒಬ್ಬ ಅಧಿಕೃತ ವ್ಯಾಪಾರಿಯು ಅಂದಾಜುಗಳ ಆಧಾರದ ಮೇಲೆ ಉದಾಹರಣೆಗೆ ವಿದೇಶದಲ್ಲಿ ವೈದ್ಯಕೀಯ ಚಿಕಿತ್ಸೆ ಅಥವಾ ವೈದ್ಯಕೀಯ ತಪಾಸಣೆ ಮುಂತಾದವುಗಳಿಗೆ ಸಂಬಂಧಿಸಿದ ಅಂದಾಜುಗಳ ಆಧಾರದ ಮೇಲೆ ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡಿದಲ್ಲಿ ಅಧಿಕೃತ ವ್ಯಾಪಾರಿಯು ಬಿಡದೆ ಅನುಸರಣೆ ಮಾಡಿ, ಅರ್ಜಿದಾರನು ಭಾರತಕ್ಕೆ ಹಿಂದಿರುಗಿದ ಹದಿನೈದು ದಿವಸಗಳೊಳಗೆ, ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡಿದ ಅಧಿಕೃತ ವ್ಯಾಪಾರಿಯ ಶಾಖೆಗೆ ವಾಸ್ತವಿಕ ವೆಚ್ಚಗಳ ವಿವರಗಳನ್ನು ತಪ್ಪದೆ ಸಲ್ಲಿಸುವಂತೆ ನೋಡಿಕೊಳ್ಳತಕ್ಕದ್ದು. ಯುಕ್ತ ಸಮಯದೊಳಗೆ ವಿವರಗಳನ್ನು ಸಲ್ಲಿಸದಿರುವ ಪಕ್ಷದಲ್ಲಿ ಆ ಸಂಗತಿಯನ್ನು ಅರ್ಜಿದಾರನು ವಾಸಿಸುತ್ತಿರುವ ಪ್ರದೇಶ ಮೇಲೆ ಕಾರ್ಯವ್ಯಾಪ್ತಿ ಹೊಂದಿರುವ ರಿಸರ್ವ್ ಬ್ಯಾಂಕ್ ನ ಪ್ರಾದೇಶಿಕ ಕಚೇರಿಗೆ ವರದಿ ಮಾಡತಕ್ಕದ್ದು.

## ಎ–೭. ವಿದೇಶೀ ವಿನಿಮಯವನ್ನು ಹಿಂದಕ್ಕೆ ಒಪ್ಪಿಸುವ ಅವಧಿ:

ಯಾವುದೇ ಉದ್ದೇಶಗಳಿಗಾಗಿ ಖರೀದಿಸಿದ ವಿದೇಶೀ ವಿನಿಮಯವನ್ನು, ಎಫ್‌ಇಎಂಎ ೧೯೯೯ ಮತ್ತು ಅದರಡಿಯಲ್ಲಿ ರಚಿಸಿದ ನಿಯಮಗಳು ಅಥವಾ ವಿನಿಯಮಗಳ ಉಪಬಂಧಗಳ ಮೇರೆಗೆ ವಿದೇಶೀ ವಿನಿಮಯವನ್ನು ಖರೀದಿಸಲು ಅಥವ ಆರ್ಜಿಸಲು ಅನುಮತಿಸಲಾಗಿರುವಂಥ ಉದ್ದೇಶಗಳಿಗೆ ಅಥವಾ ಇತರ ಯಾವುದೇ ಉದ್ದೇಶಕ್ಕೆ ಬಳಸದಿದ್ದಲ್ಲಿ, ಅದನ್ನು ಅಥವಾ ಬಳಸದ ಅದರ ಭಾಗವನ್ನು, ಅದನ್ನು ಖರೀದಿಸಿದ ದಿನಾಂಕದಿಂದ ೬೦ (ಅರವತ್ತು) ದಿವಸಗಳ ಅವಧಿಯೊಳಗೆ ಅಧಿಕೃತ ವ್ಯಕ್ತಿಗೆ ಹಿಂದಕ್ಕೆ ಒಪ್ಪಿಸಬೇಕಾಗುತ್ತದೆ. (ಸಿಎಫ್ ಅಧಿಸೂಚನೆ ಸಂಖ್ಯೆ ಎಫ್‌ಇಎಂಎ ೯/೨೦೦೦–ಆರ್‌ಬಿ, ದಿನಾಂಕ ೩ನೇ ಮೇ ೨೦೦೦).

ಟಿಪ್ಪಣಿ: ೬೦ ದಿವಸಗಳ ನಂತರ ವಿದೇಶೀ ವಿನಿಮಯವನ್ನು ಹಿಂದಕ್ಕೆ ಒಪ್ಪಿಸುವುದಕ್ಕಾಗಿ ಅಧಿಕೃತ ವ್ಯಾಪಾರಿಯನ್ನು ಒಬ್ಬ ವ್ಯಕ್ತಿ ಸಂಪರ್ಕಿಸುವ ಸಂದರ್ಭಗಳಲ್ಲಿ ಅಧಿಕೃತ ವ್ಯಾಪಾರಿಯು, ೬೦ ದಿವಸಗಳ ನಿರ್ದಿಷ್ಟಪಡಿಸಿದ

ಅವಧಿ ಮುಕ್ತಾಯಗೊಂಡಿದೆ ಎಂಬ ಕಾರಣದ ಮೇಲೆ ವಿದೇಶೀ ವಿನಿಮಯವನ್ನು ಖರೀದಿಸಲು ನಿರಾಕರಿಸತಕ್ಕದ್ದಲ್ಲ.

## ಎ–೮ ಖರ್ಚು ಮಾಡಿರದ ವಿದೇಶೀ ವಿನಿಮಯ

ಒಬ್ಬ ಪ್ರವಾಸಿಯು, ಭಾರತಕ್ಕೆ ವಾಪಸ್ಸು ತಂದಂತಹ ಖರ್ಚು ಮಾಡಿರದ ವಿದೇಶೀ ವಿನಿಮಯವನ್ನು, ಖರ್ಚು ಮಾಡಿರದ ವಿದೇಶೀ ವಿನಿಮಯವು ಕರೆನ್ಸಿ ನೋಟುಗಳ ರೂಪದಲ್ಲಿದ್ದರೆ, ಪ್ರವಾಸಿಯು ವಾಪಸ್ಸು ಬಂದ ದಿನಾಂಕದಿಂದ ೯೦ ದಿವಸಗಳೊಳಗೆ ರೂಪಾಯಿಗಳಲ್ಲಿ ಹಣ ಸಂದಾಯ ಮಾಡುವುದಕ್ಕೆ ಪ್ರತಿಯಾಗಿ ಅಧಿಕೃತ ವ್ಯಕ್ತಿಗೆ ಅಧ್ಯರ್ಪಿಸತಕ್ಕದ್ದು. ಅಂಥ ವಿದೇಶೀ ವಿನಿಮಯವು ಟ್ರ್ಯಾವಲರ್ಸ್ ಚೆಕ್‌ಗಳ ರೂಪದಲ್ಲಿದ್ದರೆ, ವಾಪಸ್ಸು ಬಂದ ೧೮೦ ದಿನವಸಗಳೊಳಗೆ ಆ ಚೆಕ್ಕುಗಳನ್ನು ಅಧಿಕೃತ ವ್ಯಕ್ತಿಗೆ ಹಿಂದಕ್ಕೆ ಒಪ್ಪಿಸತಕ್ಕದ್ದು. ಹಾಗೆ ವಾಪಸ್ಸು ತಂದಂತಹ ವಿದೇಶೀ ವಿನಿಮಯ ವನ್ನು ಮೇಲೆ ನಿರ್ದಿಷ್ಟ ಪಡಿಸಿದ ಅವಧಿಯೊಳಗೆ ತಾನು ವಿದೇಶಕ್ಕೆ ನೀಡುವ ತರುವಾಯದ ಭೇಟಿಗಳ ಸಂದರ್ಭದಲ್ಲಿ ಪ್ರವಾಸಿಯು ಬಳಸಿಕೊಳ್ಳಬಹುದು. ಆದರೆ, ಹಿಂದಿರುಗುತ್ತಿರುವ ಪ್ರವಾಸಿಯು, ವಿದೇಶೀ ಚಲಾವಣೆಯ ಟ್ರ್ಯಾವಲರ್ಸ್ ಚೆಕ್‌ಗಳನ್ನು ಮತ್ತು ನೋಟುಗಳನ್ನು ೨೦೦೦ ಅಮೇರಿಕಾ ಡಾಲರ್‌ನಷ್ಟು ಒಟ್ಟು ಮೊತ್ತದವರೆಗೆ ಮತ್ತು ಯಾವುದೇ ಗರಿಷ್ಠ ಮಿತಿಯಲ್ಲಿದೆ ವಿದೇಶೀ ನಾಣ್ಯಗಳನ್ನು ತನ್ನ ಬಳಿ ಉಳಿಸಿಕೊಳ್ಳುವುದಕ್ಕೂ ಸಹ ಅನುಮತಿಸಲಾಗಿದೆ (ಸಿಎಫ್ ಅಧಿಸೂಚನೆ ಸಂಖ್ಯೆ. ಎಫ್‌ಇಎಂಎ ೧೧/೨೦೦೦–ಆರ್‌ಬಿ ದಿನಾಂಕ ೩ ನೇ ಮೇ ೨೦೦೦). ಹಾಗೆ ಉಳಿಸಿಕೊಂಡ ವಿದೇಶೀ ವಿನಿಮಯವನ್ನು ತಾನು ವಿದೇಶಕ್ಕೆ ತರುವಾಯ ನೀಡುವ ಭೇಟಿಯ ಸಂದರ್ಭದಲ್ಲಿ ಬಳಸಿಕೊಳ್ಳಬಹುದು.

ಟಿಪ್ಪಣಿ: ಒಬ್ಬ ವ್ಯಕ್ತಿಯು ನಿರ್ದಿಷ್ಟ ಪಡಿಸಿದ ಅವಧಿಯ ನಂತರ ವಿದೇಶೀ ವಿನಿಮಯವನ್ನು ಹಿಂದಕಕೆ ಒಪ್ಪಿಸುವುದಕ್ಕಾಗಿ ಅಧಿಕೃತ ವ್ಯಕ್ತಿಯನ್ನು ಸಂಪರ್ಕಿಸಿದಲ್ಲಿ, ಅಧಿಕೃತ ವ್ಯಕ್ತಿಯು, ನಿರ್ದಿಷ್ಟಪಡಿಸಿದ ಅವಧಿ ಮುಗಿದಿದೆ ಎಂಬ ಕಾರಣದ ಮೇಲೆ ವಿದೇಶೀ ವಿನಿಮಯವನ್ನು ಖರೀದಿಸಲು ನಿರಾಕರಿಸತಕ್ಕದ್ದಲ್ಲ.

## ಎ–೯. ಪ್ರವಾಸ ವ್ಯವಸ್ಥೆಗಳು ಮುಂತಾದವುಗಳಿಗೆ ರವಾನೆ

(೧) ಒಬ್ಬ ಪ್ರವಾಸಿಯು ಭೇಟಿ ನೀಡಲು ಉದ್ದೇಶಿಸಿರುವ ದೇಶಗಳಲ್ಲಿ ಆತನ ಹೋಟೆಲ್ ವಾಸ್ತವ್ಯ, ಪ್ರವಾಸ ವ್ಯವಸ್ಥೆಗಳು ಮುಂತಾದವುಗಳಿಗಾಗಿ ಆತನ ಬೇಡಿಕೆಯಂತೆ ಯುಕ್ತ ಮಿತಿಯವರೆಗೆ ವಿದೇಶೀ ವಿನಿಮಯವನ್ನು ಅಧಿಕೃತ ವ್ಯಾಪಾರಿಯು ಜಮೆ ಮಾಡಬಹುದು. ಅದು, ಜಾರಿಯಲ್ಲಿರುವ ನಿಯಮಗಳ, ವಿನಿಯಮಗಳ ಮತ್ತು ನಿರ್ದೇಶನಗಳ ಅನುಸಾರ ಪ್ರವಾಸಿಯು ಒಬ್ಬ ಅಧಿಕೃತ ವ್ಯಕ್ತಿಯಿಂದ ಖರೀದಿಸಿದ ವಿದೇಶೀ ವಿನಿಮಯದಲ್ಲಿ (ವಿದೇಶಕ್ಕೆ ಖಾಸಗಿ ಪ್ರಯಾಣಕ್ಕಾಗಿ ತೆಗೆದ ವಿದೇಶೀ ವಿನಿಮಯ ಸೇರಿದಂತೆ) ಸೇರುವುದಿಲ್ಲ.

(೨) ಅಧಿಕೃತ ವ್ಯಾಪಾರಿಗಳು ಪ್ರವಾಸಿರಿಗೆ ಭಾರತದ ಹೋಟೆಲ್ ವಾಸ್ತವ್ಯ ಕಲ್ಪಿಸುವ ಮತ್ತು ಇತರ ಪ್ರವಾಸ ವ್ಯವಸ್ಥೆಗಳನ್ನು ಮಾಡಿಕೊಡುವ ಸಂಬಂಧ ವಿದೇಶದಲ್ಲಿನ ಹೋಟೆಲ್‌ಗಳು/ ಏಜೆಂಟರುಗಳು ಮುಂತಾದವರೊಂದಿಗೆ ಒಪ್ಪಂದ ಮಾಡಿಕೊಂಡಿರುವಂಥ ಭಾರತದಲ್ಲಿನ ಏಜೆಂಟರುಗಳ ಕೋರಿಕೆಯಂತೆ ಹಣ ರವಾನೆಗಳನ್ನು ಮಾಡಬಹುದು. ಆದರೆ, ಅಧಿಕೃತ ವ್ಯಾಪಾರಿಯು, ಜಾರಿಯಲ್ಲಿರುವ ನಿಯಮಗಳು, ವಿನಿಯಮಗಳು ಮತ್ತು ನಿರ್ದೇಶನಗಳ ಅನುಸಾರವಾಗಿ ಅಧಿಕೃತ ವ್ಯಕ್ತಿಯಿಂದ ಸಂಬಂಧಪಟ್ಟ ಪ್ರವಾಸಿಯು ಖರೀದಿಸಿದ ವಿದೇಶೀ ವಿನಿಮಯದಿಂದ (ವಿದೇಶಕ್ಕೆ ಖಾಸಗಿ ಪ್ರವಾಸ ಮಾಡಲು ತೆಗೆದ ವಿದೇಶೀ ವಿನಿಮಯವೂ ಸೇರಿದಂತೆ) ಜಮೆಯನ್ನು ಮಾಡಲಾಗುತ್ತಿದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು.

(೩) ಅಧಿಕೃತ ವ್ಯಾಪಾರಿಯು ಭಾರತದ ಪ್ರವಾಸಿಗಳಿಗೆ ಹೋಟೆಲ್ ವಾಸ್ತವ್ಯ ಕಲ್ಪಿಸುವ ಮತ್ತು ಇತರ ಪ್ರವಾಸ ವ್ಯವಸ್ಥೆಗಳನ್ನು ಮಾಡಿಕೊಡುವ ಸಂಬಂಧ ವಿದೇಶದಲ್ಲಿನ ಹೋಟೆಲುಗಳು/ ಏಜೆಂಟರುಗಳು ಮುಂತಾದವರೊಂದಿಗೆ ಒಪ್ಪಂದ ಮಾಡಿಕೊಂಡಿರುವಂಥ ಏಜೆಂಟರುಗಳ ಹೆಸರಿನಲ್ಲಿ ವಿದೇಶಿ ಕರೆನ್ಸಿ ಖಾತೆಗಳನ್ನು ತೆರೆಯಬಹುದು, ಆದರೆ

(ಎ) ಖಾತೆಗೆ ಮಾಡುವ ಜಮೆಗಳನ್ನು

(ಖ) ಪ್ರವಾಸಿರಿಂದ ವಿದೇಶೀ ವಿನಿಮಯದಲ್ಲಿ ಮಾಡಿದ ಸಂಗ್ರಹಣೆಗಳನ್ನು ಮತ್ತು

(ಖಖ) ಬುಕಿಂಗ್‌ಗಳು/ ಪ್ರವಾಸ ವ್ಯವಸ್ಥೆಗಳು ಮುಂತಾದವುಗಳನ್ನು ರದ್ದುಪಡಿಸಿದ ಕಾರಣದಿಂದಾಗಿ ಭಾರತದ ಹೊರಗಿನಿಂದ ಪಡೆದ ಮರು ಪಾವತಿಗಳನ್ನು ಠೇವಣಿ ಇಡುವ ರೂಪದಲ್ಲಿ ಮಾಡಲಾಗುತ್ತದೆ.

(ಬಿ) ವಿದೇಶೀ ವಿನಿಮಯಕ್ಕೆ ಹಾಕುವ ಖರ್ಚುಗಳು ಮೇಲಿನ (೩) ರ ಅನುಸಾರವಾಗಿ ಭಾರತದ ಹೊರಗೆ ಹೋಟೆಲ್ ವಾಸ್ತವ್ಯ ಸೌಲಭ್ಯ, ಪ್ರವಾಸ ವ್ಯವಸ್ಥೆಗಳು ಮುಂತಾದವುಗಳಿಗೆ ಹಣ ಸಂದಾಯಗಳನ್ನು ಮಾಡುವುದಕ್ಕೆ ಸಂಬಂಧಿಸಿದವುಗಳಾಗಿರುತ್ತವೆ.

**ಎ–೧೦. ರೂಪಾಯಿಗಳಲ್ಲಿ ಹಣ ಸಂದಾಯ**

ಅಧಿಕೃತ ವ್ಯಾಪಾರಿಗಳು ವಿದೇಶ ಪ್ರವಾಸಕ್ಕಾಗಿ (ಖಾಸಗಿ ಭೇಟಿಗೆ ಅಥವಾ ಯಾವುದೇ ಇತರ ಉದ್ದೇಶಕ್ಕೆ) ವಿದೇಶೀ ವಿನಿಮಯವನ್ನು ಮಾರಾಟ ಮಾಡುವುದಕ್ಕೆ ಪ್ರತಿಯಾಗಿ ೫೦,೦೦೦ ರೂಪಾಯಿಗಳ (ಐವತ್ತು ಸಾವಿರ ರೂಪಾಯಿಗಳು ಮಾತ್ರ) ವರೆಗೆ ನಗದು ಸಂದಾಯವನ್ನು ಅಂಗೀಕರಿಸಬಹುದು. ವಿದೇಶೀ ವಿನಿಮಯದ ಮಾರಾಟವು ೫೦,೦೦೦ ರೂಪಾಯಿಗಳಿಗೆ ಸಮನಾದ ಮೊಬಲಗನ್ನು ಮೀರಿದಲ್ಲಿ ಹಣ ಸಂದಾಯವನ್ನು (೧) ಅರ್ಜಿದಾರನ ಬ್ಯಾಂಕ್ ಖಾತೆಯ ಕ್ರಾಸು ಮಾಡಿದ ಚೆಕ್ ಅಥವಾ (೨) ಅರ್ಜಿದಾರನ ಭೇಟಿಯನ್ನು ಪ್ರಾಯೋಜಿಸುತ್ತಿರುವ ಫರ್ಮ್‌ನ/ ಕಂಪನಿಯ ಬ್ಯಾಂಕ್ ಖಾತೆಯ ಕ್ರಾಸು ಮಾಡಿದ ಚೆಕ್ ಅಥವಾ (೩) ಬ್ಯಾಂಕರ್ಸ್ ಚೆಕ್ / ಪೇ ಆರ್ಡ್‌ರ್/ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಮಾತ್ರ ಪಡೆಯತಕ್ಕದ್ದು.

ಟಿಪ್ಪಣಿ: ವಿದೇಶೀ ವಿನಿಮಯಕ್ಕೆ ಸಮನಾಗಿ ತೆಗೆದು ರೂಪಾಯಿ ಯಾವುದೇ ಒಂದು ಬಾರಿ ತೆಗೆದ ಅಥವಾ ಒಂದೇ ಪ್ರವಾಸಕ್ಕೆ ಭೇಟಿಗೆ ಒಟ್ಟಿಗೆ ಲೆಕ್ಕಹಾಕಲಾದ ಒಂದಕ್ಕಿಂತ ಹೆಚ್ಚು ಬಾರಿ ತೆಗೆದ ಸಂಬಂಧದಲ್ಲಿ ೫೦,೦೦೦ ರೂಪಾಯಿಗಳನ್ನು ಮೀರಿದ ಪಕ್ಷದಲ್ಲಿ, ಅದನ್ನು ಮೇಲೆ ವಿವರಿಸಿದಂತೆ ಚೆಕ್ ಅಥವಾ ಡಿಮ್ಯಾಂಡ್ ಡ್ರಾಪ್ಟ್ ಮೂಲಕ ಸಂದಾಯ ಮಾಡತಕ್ಕದ್ದು.

**ಎ–೧೧ ಮುಂಗಡ ಹಣ ರವಾನೆ**

ಅಧಿಕೃತ ವ್ಯಾಪಾರಿಗಳು ವಿದೇಶೀ ವಿನಿಮಯದ ಬಿಡುಗಡೆ ಗ್ರಾಹ್ಯವಾಗುವಂಥ ಯಾವುದೇ ಚಾಲ್ತಿ ಖಾತೆ ವ್ಯವಹಾರಕ್ಕೆ ಮುಂಗಡ ಹಣ ರವಾನೆ ಮಾಡಲು ಅಧಿಕೃತ ವ್ಯಾಪಾರಿಗಳು ಅನುಮತಿಸಬಹುದು. ಆದರೆ ಮುಂಗಡ ಹಣ ರವಾನೆ ಮೊಬಲಗು ೨೫,೦೦೦ ಅಮೇರಿಕಾ ಡಾಲರ್ ಅಥವಾ ಅದಕ್ಕೆ ಸಮನಾದ ಮೊತ್ತವನ್ನು ಮೀರಬಾರದು. ಮೊಬಲಗು ೨೫,೦೦೦ ಅಮೇರಿಕಾ ಡಾಲರ್ ಅಥವಾ ಅದಕ್ಕೆ ಸಮನಾದ

ಮೊತ್ತಕ್ಕಿಂತ ಹೆಚ್ಚಾದಲ್ಲಿ ಭಾರತದ ಹೊರಗಿರುವ ಅಂತರ ರಾಷ್ಟ್ರೀಯ ಖ್ಯಾತಿಯ ಬ್ಯಾಂಕ್‌ನಿಂದ ಖಾತರಿಯನ್ನು ಅಥವಾ ಭಾರತದಲ್ಲಿನ ಅಧಿಕೃತ ವ್ಯಾಪಾರಿಯಿಂದ ಖಾತರಿಯನ್ನು, ಅಂಥ ಖಾತರಿಯನ್ನು ಭಾರತದ ಹೊರಗಿರುವ ಅಂತರ ರಾಷ್ಟ್ರೀಯ ಖ್ಯಾತಿಯ ಬ್ಯಾಂಕ್‌ನ ಪ್ರತಿ ಗ್ಯಾರಂಟಿಗೆ ಪ್ರತಿಯಾಗಿ ನೀಡಲಾಗಿದ್ದರೆ, ಸಾಗರೋತ್ತರ ಫಲಾನುಭವಿಯಿಂದ ಪಡೆದುಕೊಳ್ಳತಕ್ಕದ್ದು. ಅಧಿಕೃತ ವ್ಯಾಪಾರಿಯು ಮುಂಗಡ ಹಣ ರವಾನೆಯ ಫಲಾನುಭವಿಯು ಭಾರತದಲ್ಲಿನ ಹಣ ರವಾನೆದಾರನೊಂದಿಗೆ ಮಾಡಿಕೊಂಡ ಕರಾರು ಅಥವಾ ಒಪ್ಪಂದದ ಅಡಿಯಲ್ಲಿ ತನ್ನ ಹೊಣೆಗಾರಿಕೆಗಳನ್ನು ಈಡೇರಿಸಿದ್ದಾನೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಅನುಸರಣಾ ಕ್ರಮ ಕೈಗೊಳ್ಳತಕ್ಕದ್ದು.

## ಭಾಗ–೧೧೧
## ಪೂರ್ಣಪ್ರಮಾಣದ ಹಣ ಪರಿವರ್ತನಕಾರರಿಂದ (ಎಫ್‌ಎಫ್‌ಎಂಸಿಗಳು) ವಿದೇಶೀ ವಿನಿಮಯದ ಬಿಡುಗಡೆ

### ಎ–೧ ಸಾಮಾನ್ಯ

ಎ.ಡಿ (ಎಂ.ಎ ಸರಣಿ) ಸುತ್ತೋಲೆ ಸಂಖ್ಯೆ ೧೧ ದಿನಾಂಕ ೧೧ ನೇ ಮೇ ೨೦೦೦ದ ಕಡೆಗೆ ಪೂರ್ಣ ಪ್ರಮಾಣದ ಹಣ ಪರಿವರ್ತನಕಾರರ (ಎಫ್‌ಎಫ್‌ಎಂಸಿ ಗಳು) ಗಮನ ಸೆಳೆಯಲಾಗಿದೆ. ಅದರಲ್ಲಿ ಅಡಕವಾಗಿರುವ ನಿರ್ದೇಶನಗಳು ಸಮುಚಿತ ಬದಲಾವಣೆಗಳೊಂದಿಗೆ ಹಣ ಪರಿವರ್ತನಕಾರರಿಗೆ ಅನ್ವಯವಾಗತಕ್ಕದ್ದು ಹಾಗೂ ಅವು ಕಾಲಕಾಲಕ್ಕೆ ತಿದ್ದುಪಡಿಮಾಡಲಾದ ಎಫ್‌ಎಲ್‌ಎಂ/ಆರ್‌ಎಲ್‌ಎಂ ನ ಉಪಬಂಧಗಳಿಗೆ ಒಳಪಡುವುದು ಮುಂದುವರೆಸತಕ್ಕದ್ದು ಎಂದು ಸುತ್ತೋಲೆಯಲ್ಲಿ ಸೂಚಿಸಲಾಗಿದೆ. ಎಫ್‌ಇಎಂಎ ೧೯೯೯ರ ಅನ್ವಯ ಪ್ರಸಕ್ತ ವಿನಿಯಮಗಳು ಈ ಮುಂದಿನಂತೆ ಮಾರ್ಪಾಡುಗೊಂಡಿವೆ.

### ಎ–೨ ಅನುಮೋದಿತ ಉದ್ದೇಶಕ್ಕಾಗಿ ಬಿಡುಗಡೆ ಮಾಡಲು ಅನುಮತಿಸಲಾಗಿರುವ ವಿದೇಶೀ ವಿನಿಮಯದ ಪ್ರಮಾಣ

(ಎ) ಬಿಟಿಕ್ಯೂ (ಎಫ್‌ಎಲ್‌ಎಂ ನ ಪ್ಯಾರಾ ೧೦) ಅಡಿಯಲ್ಲಿ ಈಗ ಅನುಮತಿಸಲಾಗುತ್ತಿರುವ ಪರಿಮಾಣಕ್ಕೆ ಪ್ರತಿಯಾಗಿ ಯಾವುದೇ ದೇಶಕ್ಕೆ (ನೇಪಾಳ ಮತ್ತು ಭೂತಾನ್ ಹೊರತುಪಡಿಸಿ) ಒಂದು ಅಥವಾ ಹೆಚ್ಚು ಭೇಟಿಗಳಿಗೆ ಒಂದು ಕ್ಯಾಲೆಂಡರ್ ವರ್ಷದಲ್ಲಿ ಒಬ್ಬ ವ್ಯಕ್ತಿಗೆ ೫೦೦೦ ಅಮೇರಿಕಾ ಡಾಲರ್ ಅಥವಾ ಅದಕ್ಕೆ ಸಮಾನವಾದ ಮೊತ್ತವನ್ನು ಮೀರದ ವಿದೇಶೀ ವಿನಿಮಯ .

(ಬಿ) ಈಗ ಅಸ್ತಿತ್ವದಲ್ಲಿರುವ ವಿದೇಶೀ ವಿನಿಮಯದ ವಿವಿಧ ಶ್ರೇಣಿಗಳಿಗೆ (ಎಫ್‌ಎಲ್‌ಎಂ ನ ಪ್ಯಾರಾ ೧೧) ವ್ಯಾಪಾರ ಪ್ರಯಾಣಕ್ಕಾಗಿ ತಂಗುವ ಅವಧಿಯನ್ನು ಗಣಿಸದೆ ಒಬ್ಬ ವ್ಯಕ್ತಿಗೆ ೨೫೦೦೦ ಅಮೇರಿಕಾ ಡಾಲರ್ ಮೀರದಂಥ ವಿದೇಶೀ ವಿನಿಮಯ.

### ಎ–೩ ದಸ್ತಾವೇಜೀಕರಣ

ರಿಸರ್ವ್ ಬ್ಯಾಂಕು, ಹಣ ಪರಿವರ್ತನೆಕಾರರು ವಿದೇಶೀ ವಿನಿಮಯ ಬಿಡುಗಡೆ ಮಾಡುವಾಗ ಪರಿಶೀಲಿಸಬೇಕಾದಂಥ ದಸ್ತಾವೇಜುಗಳನ್ನು ಇನ್ನು ಮುಂದೆ ನಿರ್ದಿಷ್ಟಪಡಿಸುವುದಿಲ್ಲ. ಈ ಸಂಬಂಧದಲ್ಲಿ ಹಣ ಪರಿವರ್ತನೆಕಾರರ ಗಮನವನ್ನು ವಿದೇಶೀ ವಿನಿಮಯ ನಿರ್ವಹಣೆ ಅಧಿನಿಯಮ, ೧೯೯೯ ರ (೧೯೯೯ರ ೪೨) ರ ೧೦ನೇ ಪ್ರಕರಣದ (೫) ನೇ ಉಪ ಪ್ರಕರಣದ ಕಡೆಗೆ ಸೆಳೆಯಲಾಗಿದೆ. ಈ ಉಪ ಪ್ರಕರಣವು, ಒಬ್ಬ ಅಧಿಕೃತ

ವ್ಯಕ್ತಿಯು ಯಾರೇ ವ್ಯಕ್ತಿಯ ಪರವಾಗಿ ವಿದೇಶೀ ವಿನಿಮಯದಲ್ಲಿ ಯಾವುದೇ ವ್ಯವಹಾರ ನಡೆಸುವುದಕ್ಕೆ ಮೊದಲು, ವ್ಯವಹಾರವು ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ಯಾವುದೇ ನಿಯಮದ, ವಿನಿಯಮದ, ಹೊರಡಿಸಲಾದ ಅಧಿಸೂಚನೆಯ, ನಿರ್ದೇಶನದ ಅಥವಾ ಆದೇಶದ ಉಪಬಂಧಗಳ ಯಾವುದೇ ಉಲ್ಲಂಘನೆಯನ್ನು ಅಥವಾ ಅವುಗಳಿಂದ ತಪ್ಪಿಸಿಕೊಳ್ಳುವುದನ್ನು ಒಳಗೊಂಡಿಲ್ಲ ಅಥವಾ ಆ ಉದ್ದೇಶಕ್ಕಾಗಿ ವಿನ್ಯಾಸಗೊಳಿಸಿದ್ದಲ್ಲ ಎಂದು ಯುಕ್ತವಾಗಿ ತನಗೆ ಮನವರಿಕೆ ಮಾಡಿಕೊಡುವಂಥ ಒಂದು ಘೋಷಣೆಯನ್ನು ಮಾಡುವಂತೆ ಮತ್ತು ಅಂಥ ಮಾಹಿತಿಯನ್ನು ನೀಡುವಂತೆ ಆ ವ್ಯಕ್ತಿಯನ್ನು ಅಗತ್ಯಪಡಿಸತಕ್ಕದ್ದು. ಯಾವುದರ ಆಧಾರದ ಮೇಲೆ ವ್ಯವಹಾರವನ್ನು ನಡೆಸಲಾಗಿದೆಯೋ ಆ ಯಾವುದೇ ಮಾಹಿತಿಯ ದಾಖಲೆಯನ್ನು/ ದಸ್ತಾವೇಜನ್ನು ರಿಸರ್ವ್ ಬ್ಯಾಂಕಿನಿಂದ ಪರಿಶೀಲನೆಗಾಗಿ ದಾಖಲೆಯಲ್ಲಿ ಇಟ್ಟುಕೊಂಡು ಬರುವಂತೆ ಹಣ ಪರಿವರ್ತನಕಾರರಿಗೆ ಸೂಚಿಸಲಾಗಿದೆ. ಸದರಿ ಖಂಡವು, ಸದರಿ ವ್ಯಕ್ತಿಯು (ಅರ್ಜಿದಾರ) ಯಾವುದೇ ಅಂಥ ಅಗತ್ಯತೆಗಳನ್ನು ಪಾಲಿಸಲು ನಿರಾಕರಿಸಿದಲ್ಲಿ ಅಥವಾ ಅದನ್ನು ತೃಪ್ತಿಕರವಾಗಿ ಪಾಲಿಸದಿದ್ದಲ್ಲಿ, ಅಧಿಕೃತ ವ್ಯಕ್ತಿಯು ವ್ಯವಹಾರಗಳನ್ನು ಕೈಗೊಳ್ಳಲು ಲಿಖಿತದಲ್ಲಿ ನಿರಾಕರಿಸತಕ್ಕದ್ದು ಮತ್ತು ಯಾವುದೇ ಉಲ್ಲಂಘನೆ ಮಾಡಲು/ ತಪ್ಪಿಸಿಕೊಳ್ಳಲು ಯೋಚಿಸಿದ್ದಾನೆಂದು ತಾನು ನಂಬಲು ಕಾರಣಗಳಿದ್ದರೆ, ಅಧಿಕೃತ ವ್ಯಕ್ತಿಯು ಆ ವಿಷಯವನ್ನು ರಿಸರ್ವ್ ಬ್ಯಾಂಕಿಗೆ ವರದಿ ಮಾಡತಕ್ಕದ್ದು.

**ಎ–೪ ಪಾಸ್‌ಪೋರ್ಟ್ ಮೇಲೆ ನಮೂದು ಮಾಡುವುದು**

ವಿದೇಶ ಪ್ರವಾಸಕ್ಕಾಗಿ ಮಾರಾಟ ಮಾಡಿದ ವಿದೇಶೀ ವಿನಿಮಯದ ಮೊತ್ತವನ್ನು ಅಧಿಕೃತ ವ್ಯಕ್ತಿಗಳು ನಮೂದಿಸುವುದು ಕಡ್ಡಾಯವೇನಲ್ಲ. ಆದರೆ, ಪ್ರವಾಸಿಯು ಕೋರಿದರೆ, ಪ್ರವಾಸಕ್ಕೆ ಮಾರಾಟ ಮಾಡಿದ ವಿದೇಶೀ ವಿನಿಮಯದ ವಿವರಗಳನ್ನು ಅವರು ದಾಖಲಿಸಿ ತಮ್ಮ ಮೊಹರು, ದಿನಾಂಕ ಮತ್ತು ಸಹಿ ಹಾಕತಕ್ಕದ್ದು.

**ಎ–೫. ಎಫ್‌ಎಲ್‌ಎಂ ಉಪಬಂಧಗಳು**

ಎಫ್‌ಎಫ್‌ಎಂಸಿ ಗಳು ಎಫ್‌ಎಲ್‌ಎಂ ನ ಇತರ ಎಲ್ಲ ಉಪಬಂಧಗಳನ್ನು ಪಾಲಿಸುವುದು ಮುಂದುವರೆಯತಕ್ಕದ್ದು.